

## ಈಶ್ವರಚಂದ್ರ

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹೋದಿಗೆರೆಯವರಾದ ಈಶ್ವರಚಂದ್ರ ಚನ್ನಗಿರಿ, ಸಾಗರ, ಶಿವಮೊಗ್ಗ, ಭದ್ರಾವತಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಅವರು ಓದಿದ್ದು ಮೆಕ್ಯಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮಾ. ಬಾಹ್ಯ ವಿದ್ಯಾರ್ಥಿಯಾಗಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ಪದವಿಯನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ಪಡೆದಿದ್ದಾರೆ. ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ವಿಮಾನ ಸಂಶೋಧನೆ ಮತ್ತು ವಿನ್ಯಾಸ ಕೇಂದ್ರದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಸಣ್ಣಕಥೆ, ಮಕ್ಕಳ ಸಾಹಿತ್ಯ ಮತ್ತು ಅನುವಾದ ಕ್ಷೇತ್ರದಲ್ಲಿ ಈಶ್ವರಚಂದ್ರ ಅವರದು ಪರಿಚಿತ ಹೆಸರು. ಅವರ ಕಥೆಗಳನ್ನು ಆಧರಿಸಿ 'ಮುನಿತಾಯಿ'(ಕಥಾಸಂಗಮ), 'ಕಾಡಿಗೆ ಹೋದವರು', 'ಮಾಗಿಯ ಕಾಲ' ಸಿನಿಮಾಗಳನ್ನು ಮಾಡಲಾಗಿದೆ. 'ರಾತ್ರಿರಾಣಿ', 'ತೀರ', 'ಗುಂಪಿನಲ್ಲಿ ಕಂಡ ಮುಖ', 'ಮುನಿತಾಯಿ', 'ಕತ್ತಲಗರ್ಭ', 'ಅದ್ವಿತೀಯ' ಕಥಾಸಂಗ್ರಹಗಳಾದರೆ, 'ಒಂದೇ ಸೂರಿನ ಕೆಳಗೆ', 'ಸಿಮೆಂಟ್ ಮನುಷ್ಯರು' ಅವರ ಕಾದಂಬರಿಗಳಾಗಿವೆ.

ಈಶ್ವರಚಂದ್ರ ಅವರ ಸಣ್ಣ ಕತೆಗಳು ತಮಿಳು, ತೆಲುಗು, ಮಲಯಾಳಂ, ಮರಾಠಿ, ಹಿಂದಿ, ಪಂಜಾಬಿ, ಉರ್ದು, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ.

'ಭಗತ್‌ಸಿಂಗ್', 'ಮಾರ್ಕೊನಿ', 'ಅ.ನ. ಕೃಷ್ಣರಾವ್', 'ಸುಬೋಧ ರಾಮರಾಯರು', 'ಬೆಂಗಳೂರು ಜಿಲ್ಲೆ ದರ್ಶನ', 'ಗೆಳೆತನ', 'ಬುದ್ಧನ ಜಾತಕ ಕತೆಗಳು' ಅವರು ಪ್ರಕಟಿಸಿದ ಕೆಲವು ಮಕ್ಕಳ ಸಾಹಿತ್ಯದ ಪುಸ್ತಕಗಳಾಗಿವೆ. ಅವರು ಕೆಲವು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಮಿತಿಯೇ ಇಲ್ಲ. ಹೊಸ ಕಥೆಗಾರರ ಕಥೆಗಳನ್ನೂ ನಾನು ಅಷ್ಟೇ ಆಸಕ್ತಿಯಿಂದ ಓದುತ್ತೇನೆ. ಅಲ್ಲಿಂದಲೂ ಯಾವುದಾದರೂ ಉತ್ತಮ ಅಂಶ ನನ್ನ ಬರಹಕ್ಕೆ ಸೇರಿಕೊಳ್ಳಬಹುದು ಎಂಬ ಆಸೆ.

ಸ್ನೇಹವಲಯದ ಅಭಿಪ್ರಾಯ ವಿನಿಮಯ ಬಿಟ್ಟರೆ ವಿಮರ್ಶೆಯ ಒತ್ತಾಸೆ ನನಗೆ ಅಷ್ಟಾಗಿ ಸಿಕ್ಕಿಲ್ಲ. ನನ್ನ ಕಥಾ ಸಂಕಲನಗಳಿಗೆ ದಿ. ಇ.ಆರ್. ಸೇತೂರಾಮ್, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ದಿ. ಕೆ. ನರಸಿಂಹಮೂರ್ತಿ ಅವರು ಬರೆದ ಮುನ್ನುಡಿಗಳು ಉಪಯುಕ್ತ ಮಾರ್ಗದರ್ಶನ ಮತ್ತು ಆತ್ಮವಿಶ್ವಾಸವನ್ನು ಕೊಟ್ಟಿವೆ.

ಕಥೆಯ ವಸ್ತುಗಳು ನಮ್ಮ ಸುತ್ತಮುತ್ತ ಎಲ್ಲೆಲ್ಲೂ ಇವೆ. ಅವು ಗಾಳಿಯಂತೆ ನಮ್ಮನ್ನು ಒತ್ತಿಕೊಂಡೇ ಇವೆ. ಅವನ್ನು ಗುರುತಿಸುವ ಕಣ್ಣು ನಮಗಿರಬೇಕಷ್ಟೆ. ಕೆಲವು ಸಲ ಯಾರೋ